## ಮೂವಿ ಚಾನೆಲ್‌ನಲ್ಲಿ ಉತ್ತಮ ಚಿತ್ರ

ಇತ್ತೀಚೆಗೆ ಪ್ರಾರಂಭವಾದ 'ಪಬ್ಲಿಕ್ ಮೂವೀಸ್'ನಲ್ಲಿ ಪ್ರಸಾರವಾದ 'ಮಹಾ ಎಡಬಿಡಂಗಿ' ಚಿತ್ರ ತುಂಬ ಖುಷಿ ಕೊಟ್ಟಿತು. ನಮ್ಮ ನೆಚ್ಚಿನ ಗಾಯಕರಾದ ಎಸ್.ಪಿ.ಬಿ. ಅವರ ಮುಗ್ಧ, ಸಹಜ ನಟನೆ ಮಾತ್ರವಲ್ಲದೆ, ಕತೆ ತುಂಬ ಲವಲವಿಕೆಯಿಂದ ಸಾಗುತ್ತದೆ. ಹಾಸ್ಯ, ಸಂತಸ, ದುಃಖ, ಗಾಯನದಲ್ಲೇ ವಿನೋದಮಯ ಸಂಭಾಷಣೆ, ಹೃದಯಂಗಮ ಸನ್ನಿವೇಶಗಳಿಂದ ಉತ್ತಮ ಸಂದೇಶಗಳನ್ನು ಚಿತ್ರ ನೀಡುತ್ತದೆ. ಇಂಥದೊಂದು ಚಿತ್ರ ಯಾಕೆ ಅಷ್ಟೊಂದು ಜನಪ್ರಿಯವಾಗಿಲ್ಲ? ಇಂಥ ಚಿತ್ರವನ್ನು ವೀಕ್ಷಕರಿಗೆ ನೀಡಿದ ಪಬ್ಲಿಕ್ ಟಿ.ವಿ.ಗೆ ಅಭಿನಂದನೆಗಳು.

–ಎಲ್. ಗಿರಿಜಾರಾಜ್, ಬೆಂಗಳೂರು

## ನೈಜ ಅಭಿನಯ

'ಸರಳ ಜೀವನ' ಚಾನಲ್‌ನಲ್ಲಿ 'ಸೀತೆ, ಲೋಕಮಾತೆ' ಕಾರ್ಯಕ್ರಮದಲ್ಲಿ ಸಂಪೂರ್ಣ ರಾಮಾಯಣ ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಅಲ್ಲಿ ನಟಿಸಿರುವ ಎಲ್ಲಾ ಪಾತ್ರಧಾರಿಗಳ ಪೈಕಿ ರಾವಣನ ಪಾತ್ರ ಮಾಡಿರುವವರು ತುಂಬಾ ಚೆನ್ನಾಗಿ ತಮ್ಮ ಪಾತ್ರವನ್ನು ನಿರ್ವಹಿಸಿರುತ್ತಾರೆ. ಹಾಗೆ 'ಮಂಡೋದರಿ' ಪಾತ್ರಧಾರಿ ಕೂಡ ತುಂಬಾ ನೈಜವಾಗಿ ಅಭಿನಯಿಸಿದ್ದಾರೆ, ನಮ್ಮ ಮನ ಗೆದ್ದಿದ್ದಾರೆ. ಆದರೆ ಈ ಯುದ್ಧಕಾಂಡ ಯಾಕೋ ಬಹಳ ನಿಧಾನವಾಗಿ ಸಾಗುತ್ತಿದೆ.

–ಶ್ರೀನಿವಾಸನ್, ಮೈಸೂರು

## ಆಣೆಗೆ ಬೆಲೆಯಿಲ್ಲವೆ?

ಹಿಂದಿನ ಕಾಲದಿಂದಲೂ ಆಣೆಗೆ ಒಂದು ಮರ್ಯಾದೆ– ಬೆಲೆ ಇರುತ್ತಿತ್ತು. ಈಗ ಅದಕ್ಕೆ ಅವಸಾನದ ಗತಿ ಬಂದಿದೆ. ಯಾವುದೆ ಒಂದು ವಿಷಯದಲ್ಲಿ ನಿಜ ಇತ್ಯರ್ಥ ಮಾಡಲು ದೇವರ ಮೇಲೆ ಇಲ್ಲವೆ ತಾಯಿಯ ಮೇಲೆ ಆಣೆ ಮಾಡಿಸುತ್ತಿದ್ದರು. ಇಲ್ಲವಾದಲ್ಲಿ ಕೊನೆಯದಾಗಿ ಮಗುವಿನ ಮೇಲೆ ಆಣೆ ಮಾಡಿಸುತ್ತಿದ್ದರು. ಆದ್ಯಾವ ಪುಣ್ಯಾತ್ಮ ಮೊದಲು ಒಂದು ಧಾರಾವಾಹಿಯಲ್ಲಿ ಮೊಬೈಲ್ ಮೇಲೆ ಆಣೆ ಎಂದು ಆರಂಭಿಸಿದ, ಈಗ ಅದು ವಿದ್ಯಾ– ವಿನಾಯಕ ಧಾರಾವಾಹಿಯಲ್ಲಿ ಗಂಡನ ಮೇಲೆ ಆಣೆ ಎಂದು ಆರಂಭವಾಗಿದೆ. ಆದರೆ ಅದು ನಿಜವಾಗಿ ಹಾಸ್ಯ ಎನ್ನುವ ರೀತಿಯಲ್ಲಿ ಇಲ್ಲ. ನಿಜವಾಗಿ ಮನಸ್ಸು ರೋಸಿಹೋಗಿ ವಾಕರಿಕೆ ತರಿಸುವಂತಿದೆ, ದಯವಿಟ್ಟು ಈ ರೀತಿಯ ಹಾಸ್ಯ ಬೇಡ ಎಂದು ಧಾರಾವಾಹಿಗಳ ನಿರ್ದೇಶಕರ ಬಳಿ ನನ್ನ ಕಳಕಳಿಯ ಮನವಿ.

–ಎನ್.ಎಸ್. ಚಂದ್ರಶೇಖರ, ಬೆಂಗಳೂರು

### ವಾರದ ಪತ್ರ

## ಸೇಡಿನ ಬಣ್ಣ

ಕಲರ್ಸ್ ಎಂದರೆ ಬಣ್ಣಗಳು ಎಂದು ಅರ್ಥ. ಆದರೆ ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುವ ಧಾರಾವಾಹಿಗಳು ಹಲವು ಬಣ್ಣಗಳಲ್ಲಿ ಇಲ್ಲ. ಒಂದೇ ಬಣ್ಣ. ಅದು ಸೇಡು, ಹಿಂಸೆ, ಕುತಂತ್ರ, ಕೊಲೆ, ಅಪಹರಣ ಮುಂತಾದವುಗಳ ಪ್ರತೀಕವಾಗಿರುವ ಕೆಂಪು ಬಣ್ಣ ಮಾತ್ರ.

ಪ್ರತಿಯೊಂದು ಧಾರಾವಾಹಿಯಲ್ಲೂ ಒಬ್ಬೊಬ್ಬ ಲೇಡಿ ಡಾನ್‌ಗಳು, ಅವರಿಗೆ ಪಾತಕಲೋಕದ ಒಂದು ನೆಟ್‌ವರ್ಕ್. ಅವರೆಲ್ಲ ಉದ್ಯೋಗಪತಿಗಳೇ. ಕುಟುಂಬದ ಯಜಮಾನಿಕೆ ಅವರ ಕೈಯಲ್ಲೇ. ಲಕ್ಷಗಟ್ಟಲೇ ಹಣವನ್ನು ಅವರು ತಮ್ಮ ಕೈಕೆಳಗಿನ ಗೂಂಡಾಗಳಿಗೆ ನೀಡಬಲ್ಲರು. ಕಿಡ್ನ್ಯಾಪ್ ಮಾಡುವುದು, ಕೊಲೆ ಮಾಡಿಸುವುದು ಅವರಿಗೆ ನೀರು ಕುಡಿದಷ್ಟೇ ಸಲೀಸು. ಅವರು ಮಾಡಿಸಿದ ಕೊಲೆಯ ತನಿಖೆ ನಡೆಯುವುದೇ ಇಲ್ಲ. ಒಂದು ಕುಟುಂಬ ಒಂದು ಕಂಪನಿ ನಡೆಸಬೇಕಾದರೆ ಅದರ ಹಣಕಾಸಿನ ಲೆಕ್ಕಪತ್ರ ಇರುವುದಿಲ್ಲವೆ? ಕಂಪನಿಯ ಹಣವನ್ನು ಯಾರು ಬೇಕಾದರೂ ಬೇಕಾಬಿಟ್ಟಿಯಾಗಿ ಖರ್ಚು ಮಾಡಬಹುದೇ? ಈ ಲೇಡಿ ಡಾನ್‌ಗಳಿಗೆ ಪೋಲೀಸು, ಕಾನೂನು ಯಾವುದೂ ಇಲ್ಲ.

–ಮುರಲೀಧರ ಕುಲಕರ್ಣಿ, ಬೀದರ್

## ಮರು ಪ್ರಸಾರವಾಗಲಿ

ಇಂದು ಕನ್ನಡ ವಾಹಿನಿಗಳಲ್ಲಿ ಧಾರಾವಾಹಿಗಳ ಮಹಾಪೂರವೇ ಪ್ರಸಾರವಾಗುತ್ತಿದೆ. ಆದರೆ ಇತ್ತೀಚೆಗೆ ಹಾಸ್ಯ ಧಾರಾವಾಹಿಗಳು ಇವುಗಳ ಮಧ್ಯೆ ಕಾಣೆಯಾಗುತ್ತಿವೆ. ಎಲ್ಲಾ ವಾಹಿನಿಗಳಲ್ಲಿ ಧಾರಾವಾಹಿಗಳನ್ನು ನೋಡಿ ಬೇಸತ್ತ ವೀಕ್ಷಕರಿಗೆ ಮುದ ನೀಡುವ ಹಾಸ್ಯ ಧಾರಾವಾಹಿಗಳು ಮತ್ತೆ ಪ್ರಸಾರವಾಗುವಂತಾಗಬೇಕು. ಈ ಹಿಂದೆ ಪ್ರಸಾರವಾಗುತ್ತಿದ್ದ 'ಪಾ.ಪ. ಪಾಂಡು', 'ಸಿಲ್ಲಿ ಲಲ್ಲಿ' ಮುಂತಾದ ಹಾಸ್ಯ ಧಾರಾವಾಹಿಗಳನ್ನು ಮರುಪ್ರಸಾರ ಮಾಡಬೇಕಾಗಿ ಮನವಿ. ಇದರಿಂದ ರಾತ್ರಿ ಸ್ವಲ್ಪ ಮನಸ್ಸಿಗೆ ನೆಮ್ಮದಿ, ಸುಖ ಎನಿಸುತ್ತದೆ ಅಲ್ಲವೆ?

–ಎಸ್.ನರೇಂದ್ರ ನಾಯಕ್, ಗಂಗೊಳ್ಳಿ

## ನೀರಸ ಧಾರಾವಾಹಿಗಳು

ಟಿವಿ ಧಾರಾವಾಹಿಗಳ ಕುರಿತಂತೆ ಜಾಣರಪೆಟ್ಟಿಗೆಯಲ್ಲಿ ನಾನು 3–4 ಪತ್ರಗಳನ್ನು ಬರೆದಿದ್ದೆ. ಆದರೆ ವಾಹಿನಿಗಳ ಮುಖ್ಯಸ್ಥರು, ಧಾರಾವಾಹಿಗಳ ಕಥೆಗಾರರು ಇನ್ನೂ ಸುಧಾರಿಸಿಕೊಳ್ಳದೇ ಕಲ್ಪನಾಲೋಕದಲ್ಲೇ ಇದ್ದಾರೆ. ಟಿವಿ ಕಲರ್ಸ್‌ನಲ್ಲಿ ಬರುವ ಧಾರಾವಾಹಿಗಳು ಇನ್ನೂ ಎಳೆಯುತ್ತಾ ಇವೆ. ನಾನು ಮೂರು– ನಾಲ್ಕು ವರ್ಷಗಳಿಂದ ನೋಡುತ್ತಾ ಬಂದಿದ್ದೇನೆ. ನನಗೂ 80 ವರ್ಷ ತುಂಬುತ್ತಿದೆ. ಬೇರೆ ಹೊಸ ಕಾದಂಬರಿ, ಕಥೆಗಳಿಗೆ ಬರವೇ? ಕುಲವಧು, ಪುಟ್ಟ ಗೌರಿ ಮದುವೆ, ಲಕ್ಷ್ಮೀಬಾರಮ್ಮ, ಅಗ್ನಿ ಸಾಕ್ಷಿ ನಾಲ್ಕೂ ನೀರಸವಾಗಿ ಬೋರ್ ಹೊಡೀತಾ ಇವೆ. ಅಲ್ಲಿನ ಪಾತ್ರಧಾರಿಗಳಿಗೂ ವಯಸ್ಸಾಗಿದೆ.

ಈಗಲಾದರೂ ಟಿವಿಯವರಾಗಲಿ ಅಥವಾ ಧಾರಾವಾಹಿಗಳ ನಿರ್ಮಾಪಕರಾಗಲಿ ಈ ಧಾರಾವಾಹಿಗಳನ್ನು ಬೇಗ ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

–ಸಾ.ನಾ. ಶ್ರೀನಿವಾಸಮೂರ್ತಿ, ಬೆಂಗಳೂರು

## ಅಮೋಘ ಕನ್ನಡ!

ಕನ್ನಡ ವಾರ್ತಾವಾಹಿನಿಗಳು ಬಳಸುವ ಕನ್ನಡದ ಬಗ್ಗೆ ಎಲ್ಲರಿಗೂ ಗೊತ್ತಿದೆ. ಟಾಂಗ್, ಸಾಥ್, ಹವಾ, ಟಕ್ಕರ್ ಮುಂತಾದ ಅತ್ಯಮೋಘ ಪದಗಳು ಕನ್ನಡಿಗರ ಕಿವಿಯನ್ನು ಕುಕ್ಕುತ್ತಲೇ ಬಂದಿವೆ. ಇತ್ತೀಚೆಗೆ ವಾಹಿನಿಯವರ ಪಾಂಡಿತ್ಯವನ್ನು ಎತ್ತಿಹಿಡಿಯುವ ಇನ್ನೊಂದು ನಿದರ್ಶನ ಎಂದರೆ ಅವರು ಕರ್ನಾಟಕದ ಚುನಾವಣೆ ಕುರಿತು ಬಳಸುವ ಪದಗಳು. ಮೋದಿಯ ದಂಡಯಾತ್ರೆ, ಮೋದಿ ದಂಡೆತ್ತಿ ಬರುತ್ತಿದ್ದಾರೆ ಎಂದೆಲ್ಲ ಬಳಕೆಯಾಗುತ್ತಿದೆ. ದಂಡೆತ್ತಿ ಬರುವುದು ಎಂದರೆ ಏನೆಂದು ಈ ಅಜ್ಞಾನಿಗಳಿಗೆ ತಿಳಿದಿಲ್ಲ. ಈ ಪದದ ತೂಕ ಅರಿತವರು ಅದನ್ನು ಈ ಸಂದರ್ಭದಲ್ಲಿ ಬಳಸಲಾರರು. ಕನ್ನಡೇತರರ ಕೈಯಲ್ಲಿ ವಾಹಿನಿಗಳ ಆಡಳಿತ ಇರುವವವರೆಗೂ ಟಿವಿ ಮಾಧ್ಯಮದಲ್ಲಿ ಘನವಾದ ಕನ್ನಡ ಕಾಣಸಿಗದು ಎಂಬುದಂತೂ ನಿಜ.

–ಎಮ್.ಎಸ್.ವಿನಯ್, ಬೆಂಗಳೂರು

## ಅದ್ಭುತ ನಟನೆ

ಕಲರ್ಸ್ ಕನ್ನಡ ವಾಹಿನಿಯಲ್ಲಿ ರಾತ್ರಿ 8.30ಕ್ಕೆ ಪ್ರಸಾರವಾಗುತ್ತಿರುವ ಶನಿ ಧಾರಾವಾಹಿ ತುಂಬಾ ಚೆನ್ನಾಗಿ ಬರುತ್ತಿದೆ. ಇದರಲ್ಲಿ ನಟರು ಅದ್ಭುತವಾಗಿ ನಟಿಸುತ್ತಿದ್ದಾರೆ. ಇದನ್ನು ಶನಿವಾರದವರೆಗೆ ವಿಸ್ತರಿಸಬೇಕಾಗಿ ವಿನಂತಿ.

–ಕೆ. ಗಣೇಶ ಶೆಟ್ಟಿ, ಕೊಂಚಾಡಿ